ಬಾಗೂರು ಆರ್. ನಾಗರಾಜಪ್ಪ

ಒಂದೂರಿನಲ್ಲಿ ಒಬ್ಬ ಗೌಡನಿದ್ದ. ಅವನು ನಿತ್ಯವೂ ಊರೂರು ತಿರುಗುತ್ತಿದ್ದ. ಹೆಂಡತಿ ಎಷ್ಟು ಹೇಳಿದರೂ ತಿರುಗುವುದನ್ನು ಬಿಡಲಿಲ್ಲ. ಇದರಿಂದಾಗಿ, ಗೌಡನ ಹೆಂಡತಿಗೆ ಅವನ ಪ್ರೀತಿ ಎಳ್ಳಷ್ಟು ಸಿಗುತ್ತಿರಲಿಲ್ಲ. ಕೆಲವೊಮ್ಮೆ ರಾತ್ರಿಯ ಹೊತ್ತು ಸಹ ಪರಸ್ಥಳದಲ್ಲಿ ಮೋಜು – ಮಸ್ತಿ ಮಾಡುತ್ತಿದ್ದ. ಇದರಿಂದ ರೋಸಿಹೋದ ಗೌಡನ ಹೆಂಡತಿಯು ತನ್ನ ಗಂಡನಿಗೆ ತಕ್ಕ ಶಾಸ್ತಿ ಮಾಡಬೇಕೆಂದು ತೀರ್ಮಾನಿಸಿ, ತನ್ನ ಬಾಲ್ಯದ ಗೆಣೆಕಾರನೊಬ್ಬನಿಗೆ ಗಂಡನು ಇಲ್ಲದಾಗ ಮನೆಗೆ ಬಂದು ಹೋಗುವಂತೆ ಪ್ರೀತಿಯಿಂದ ಒತ್ತಾಯಿಸಿದಳು.

ಅದರಂತೆ, ಗೌಡರು ಮನೆಯಿಂದ ಹೊರಬಿದ್ದೊಡನೆ ಆಕೆಯ ಗೆಣೆಕಾರನು ಯಾರಿಗೂ ಗೊತ್ತಾಗದಂತೆ ಗೌಡನ ಮನೆ ಸೇರಿಕೊಂಡು ಗೌಡತಿಯೊಂದಿಗೆ ಪ್ರೇಮದಾಟ ನಡೆಸಿ ಹೋಗತೊಡಗಿದ. ಈ ಸಂಗತಿ ಊರಿನ ಕೆಲವರಿಂದ ಗೌಡನ ಕಿವಿಗೆ ಬಿತ್ತು. ಗೌಡ, ಹೇಗಾದರೂ ಮಾಡಿ ಈ ಇಬ್ಬರೂ ಮನೆಯಲ್ಲಿದ್ದಾಗಲೇ ಹಿಡಿದು ಇಬ್ಬರಿಗೂ ತಕ್ಕ ಶಿಕ್ಷೆ ವಿಧಿಸಬೇಕೆಂದು ಯೋಚಿಸಿದ.

ಗೌಡ, ಒಂದು ದಿನ ಉಪಾಯವೊಂದನ್ನು ಮಾಡಿದ. 'ತಾನು ಬೆಳಿಗ್ಗೆಯೇ' ದೂರದ ಪಟ್ಟಣಕ್ಕೆ ಹೋಗಬೇಕಾಗಿದೆ, ಬರುವುದು ಸಂಜೆ ತಡವಾಗಬಹುದು ಎಂದು ಹೆಂಡತಿಗೆ ಹಿಂದಿನ ರಾತ್ರಿಯೇ ತಿಳಿಸಿದ. ಗೌಡತಿಗೆ ಒಳಗೊಳಗೇ ಖುಷಿ ಉಂಟಾಯಿತು. ಬೆಳಿಗ್ಗೆ, ಗೌಡನ ಹೆಂಡತಿ ನೀರು ಹೊತ್ತು ತರುವ ನೆಪದಲ್ಲಿ ತನ್ನ ಗೆಣೆಕಾರನಿಗೆ 'ಸೌಂಜ್ಞೆ' ನೀಡಲು ಊರ ಮುಂದಲ ಸೇದುವ ಭಾವಿಯತ್ತ ಹೊರಟಳು. ಗೌಡ, ತಾನು ಮನೆಯ ಮುಂಬಾಗಿಲ ಚಿಲಕ ಹಾಕಿಕೊಂಡು ಸ್ವಲ್ಪ ಹೊತ್ತಿನಲ್ಲೇ ಹೊರಡುತ್ತೇನೆಂದು ತಿಳಿಸಿದ. ಹೆಂಡತಿ ಬಾವಿಯತ್ತ ಹೊರಟಳು.

ಹೆಂಡತಿ ಸ್ವಲ್ಪ ಮರೆಯಾಗಿ ಹೋಗುತ್ತಲೇ, ಗೌಡ ಹಿಂದಿನ ಬಾಗಿಲ ಒಳ ಚಿಲಕವನ್ನು ತೆಗೆದು, ಮುಂಬಾಗಿಲ ಹೊರ ಚಿಲಕವನ್ನು ಹಾಕಿಕೊಂಡು, ಮನೆಯ ಹಿಂಬಾಗಿಲಿನಿಂದ ಒಳ ಸೇರಿ, ಚಿಲಕ ಹಾಕಿ, ಅಟ್ಟದ ಮೇಲೆ ಏರಿ ಸದ್ದಿಲ್ಲದಂತೆ ಕಾದು ಕುಳಿತ.

ಸ್ವಲ್ಪ ಹೊತ್ತಿನ ನಂತರ, ಗೌಡನ ಹೆಂಡತಿ ಬಹು ಖುಷಿಯಿಂದ ನೀರಿನ ಕೊಡಗಳನ್ನು ಹೊತ್ತು ಮನೆಗೆ ಬಂದವಳೆ, ಗೆಣೆಕಾರನಿಗಾಗಿ ರುಚಿಯಾದ

